## ಸೂಕ್ತಿಪ್ರಭ

ಇನ್ನೊಬ್ಬನಿಗೆ ಬೋಧನೆ ಮಾಡುವುದಕ್ಕಿಂತ ಸುಮ್ಮನೆ ದೇವರನ್ನು ಪೂಜೆ ಮಾಡಿದರೆ, ಅದೇ ಸಾಕಾದಷ್ಟು, ಬೋಧನೆ ಮಾಡಿದಂತೆ ಆಯಿತು.

ರೇಷ್ಮೆಹುಳು ತನ್ನ ನೂಲಿನಿಂದಲೇ ಬಂಧಿಯಾಗುವುದು. ಅದರಂತೆಯೇ ಪ್ರಾಪಂಚಿಕ ಮನುಷ್ಯನು ತನ್ನ ಕರ್ಮದ ಬಲೆಯಲ್ಲಿ ಸಿಕ್ಕಿ ಬೀಳುವನು.

ಯಾರ ಹೃದಯ ದೇವರಿಗಾಗಿ ಕಾತರಿಸುವುದೊ ಅವರು ಜಾತಿಮತಗಳ ವೈಷಮ್ಯದಿಂದ ದೂರ ಇರುತ್ತಾರೆ. ಹುಲ್ಲಿನ ಜೊಂಡು ಹರಿಯುತ್ತಿರುವ ನೀರಿನಲ್ಲಿ ಬೆಳೆಯುವುದಿಲ್ಲ. ಅದು ಆಳವಿಲ್ಲದ ಕಟ್ಟೆಗಳಲ್ಲಿ ಬೆಳೆಯುತ್ತದೆ.

ಹಸಿಯ ಬತ್ತದ ಕಾಳು ಮೊಳಕೆಯಾಗುತ್ತದೆ. ಬೇಯಿಸಿದ ಕಾಳು ಮೊಳಕೆಯಾಗುವುದಿಲ್ಲ. ಇದರಂತೆಯೇ ಯಾರು ಸಿದ್ಧರಾಗಿರುವರೊ ಅವರು ಪ್ರಪಂಚದಲ್ಲಿ ಮತ್ತೆ ಹುಟ್ಟುವುದಿಲ್ಲ.

ಮನುಷ್ಯನ ಮನಸ್ಸು ಯಾವಾಗಲೂ ದೇವರ ಕಡೆ ತಿರುಗಿದ್ದರೆ ಅವನು ಎಲ್ಲ ಅಪಾಯಗಳಿಂದಲೂ ಪಾರಾಗುವನು.

ಸೇತುವೆ ಕೆಳಗೆ ಸದಾ ನೀರು ಓಡುತ್ತಾ ಇದ್ದು, ಹೇಗೆ ನಿಲ್ಲುವುದಿಲ್ಲವೋ ಹಾಗೆಯೇ ಮುಕ್ತನ ಕೈಯಲ್ಲಿ ಹಣ ನಿಲ್ಲದೆ ಓಡುವುದು.

ಯಾರಿಗೆ ಆಧ್ಯಾತ್ಮಿಕ ದಾಹವಿಲ್ಲವೊ ಅವನು ಎಲ್ಲ ಧರ್ಮಗಳನ್ನು ದೂರುತ್ತ ಬೇಕಾದಷ್ಟು ವಾದ ಮಾಡುತ್ತ ಹೋಗುವನು. ಯಾರಿಗೆ ಆ ದಾಹ ಹೆಚ್ಚಾಗಿರುವುದೊ ಅವರಿಗೆ ಸೂಕ್ಷ್ಮ ಪರೀಕ್ಷೆಗೆ ಸಮಯವಿಲ್ಲ.

ಈಜು ಕಲಿತುಕೊಳ್ಳುವುದಕ್ಕೆ ಮುಂಚೆ ನೀರಿನಲ್ಲಿ ಬಹಳ ಒದ್ದಾಡಬೇಕು. ಇದರಂತೆಯೇ ಸಚ್ಚಿದಾನಂದಸಾಗರದಲ್ಲಿ ಈಜು ಕಲಿಯಬೇಕಾದರೆ ನೀನು ಬಹಳ ಕಷ್ಟ ಪಡಬೇಕು.

ಸಾಧುಗಳ ಸಂಗ ಅಕ್ಕಿಯನ್ನು ತೊಳೆದ ನೀರಿನಂತೆ. ಅದನ್ನು ಕುಡಿದರೆ ಹೆಂಡದ ಅಮಲು ಇಳಿಯುತ್ತದೆ. ಹಾಗೆಯೇ, ಆಸೆಯ ಅಮಲು ಸಾಧುಗಳ ಸಂಗದಿಂದ ಇಳಿಯುವುದು.

*ಶ್ರೀರಾಮಕೃಷ್ಣ*

## ಪ್ರಾರ್ಥನೆ

### ರಾಮಕೃಷ್ಣ ರಕ್ಷಿಸು

ರಾಮಕೃಷ್ಣ ಪರಮಹಂಸ
ಗುರುವರೇಣ್ಯ ರಕ್ಷಿಸು
ಸೋಮಸಾಮ್ಯನಾದ ನಿನ್ನ
ಬೇಡಿಕೊಂಬೆ ಪಾಲಿಸು ॥ ಪ ॥

ನಾನು ನನ್ನದೆಂದು ಸತತ
ಪೋರ್ವ ಸ್ವಾರ್ಥಿಯೆನ್ನನು
ಸಾನುರಾಗದಿಂದ ತಿದ್ದಿ
ಸಲಹು ಪಿಡಿದು ಕರವನು ।
ಜ್ಞಾನನಿಧಿಯೆ ನಿನ್ನ ಬಿಟ್ಟು
ಕಾಯ್ವರಾರ ಕಾಣೆನು
ಧ್ಯಾನಗೈದು ನಿನ್ನ ಭಜಿಪ
ನರನು ತಾನೆ ಧನ್ಯನು ॥ ೧ ॥

ನೇಮದಿಂದ ಪೂಜೆಪಾದ-
ಲೋಡಿ ಬಂದು ಪೊರೆವನೆ
ಕಾಮಿತಾರ್ಥವಿತ್ತು ಕಾಯ್ವ
ಕ್ಷೋಣಿಕಲ್ಪಭೂಜನೆ ।
ವ್ಯೋಮಕೇಶನನ್ನು ಸೇರ್ವ
ಮಾರ್ಗವೊರೆದ ಸಂತನೆ
ಪ್ರೇಮದಿಂದ ಬಾಗಿ ಬೇಳ್ಪೆ
ಸೇರಿಸೆನ್ನ ಬೇಗನೆ ॥ ೨ ॥

ಜ್ಞಾನಮಾರ್ಗ ಬಿಟ್ಟಧರ್ಮ
ಮಾರ್ಗದೊಳ್ನಿರಂತರ
ಮಾನಗೆಟ್ಟು ಸಾಗುತಿಹೆನು
ಪಾಪವೆಸಗಿ ಬಹುತರ ।
ಮೌನಿವರನೆ ತೋರಿ ನೀನು
ಜ್ಞಾನಧರ್ಮಪರಿಸರ
ದೀನಬಂಧು ಪ್ರೇಮಸಿಂಧು
ಪೊರೆಯೊ ಬಂದು ಗುರುವರ ॥ ೩ ॥

*ಕುಮಾರ ಶಿವಗುಣ ಸ್ವಾಮಿಗಳು*